<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1355
ಸದಸ್ಯರ ಹೆಸರು : ಶ್ರೀ ಕೆ.ಗೋವಿಂದ ರಾಜ್
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 23.09.2021

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ 3 ವರ್ಷಗಳಲ್ಲಿ ಚಲನಚಿತ್ರ ಸೇರಿದಂತೆ ಇತರೆ ಚಿತ್ರೀಕರಣ ಸಂದರ್ಭದಲ್ಲಿ ರಾಜ್ಯದಲ್ಲಿ ಸಾವಿಗೀಡಾಗಿರುವ ಕಲಾವಿದರು ಸ್ಟಂಟ್‌ಮ್ಯಾನ್‌ಗಳ ಪ್ರಕರಣಗಳ ಬಗ್ಗೆ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ಕುರಿತಾದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು.	ಚಲನಚಿತ್ರ ನೀತಿ - 2011 ರನ್ವಯ ಚಿತ್ರೀಕರಣಕ್ಕೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಡಿಯಲ್ಲಿ ಏಕಗವಾಕ್ಷಿ ವ್ಯವಸ್ಥೆಯಡಿ ಅನುಮತಿ ನೀಡಿದಾಗ, ಚಿತ್ರೀಕರಣ ಘಟಕದ ಮುಖ್ಯಸ್ಥರು ಸುರಕ್ಷತೆಯ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕೆಂಬ ಷರತ್ತನ್ನು ವಿಧಿಸಿರುತ್ತದೆ ಹಾಗೂ ಭದ್ರತೆಗೆ ಸಂಬಂಧಿಸಿದಂತೆ, ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಮುಂಚಿತವಾಗಿ ತಿಳಿಸಿ, ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚನೆ ನೀಡಲಾಗುತ್ತಿದೆ.
(ಆ)	ಚಿತ್ರೀಕರಣ ಸಂದರ್ಭದಲ್ಲಿ ಸ್ಟಂಟ್ ಮ್ಯಾನ್‌ಗಳ ಹಾಗೂ ಇನ್ನಿತರೆ ಕಲಾವಿದರ ಸುರಕ್ಷತೆ ಬಗ್ಗೆ ಇರುವ ನಿರ್ಲಕ್ಷ್ಯ ಮತ್ತು ಮುಂಜಾಗರೂಕತೆ ಕೊರತೆಯಿಂದಾಗಿ ಸಾವುಗಳು ಸಂಭವಿಸುತ್ತಿರುವ ಪ್ರಕರಣಗಳು ಹೆಚ್ಚಲು ಕಾರಣ ಎಂಬುದು ನಿಜವೇ; ಹಾಗಿದ್ದಲ್ಲಿ, ಕುರಿತಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿಯನ್ನು ಒದಗಿಸುವುದು)	ಚಲನಚಿತ್ರ ನೀತಿ – 2011 ರನ್ವಯ ವಾರ್ತಾ ಇಲಾಖೆಯು ಒಟ್ಟಾರೆಯಾಗಿ ಇಡೀ ರಾಜ್ಯದಲ್ಲಿ ಚಿತ್ರೀಕರಣ ಮಾಡಲು ಪ್ರಾಥಮಿಕ ಅನುಮತಿಯನ್ನು ಮಾತ್ರ ನೀಡುತ್ತದೆ. ಇದನ್ನು ಹೊರತು ಪಡಿಸಿ, ಸುರಕ್ಷತೆಯ ಬಗ್ಗೆ ಮುಂಜಾಗರೂಕತಾ ಕ್ರಮಗಳನ್ನು ಆಯಾ ಚಿತ್ರೀಕರಣ ಘಟಕದ ಮುಖ್ಯಸ್ಥರು, ಚಿತ್ರೀಕರಣ ನಡೆಯುವ ಸ್ಥಳಗಳಲ್ಲಿ ಆಯಾ ಸ್ಥಳಗಳಿಗೆ ಅನ್ವಯಿಸಿದಂತೆ ಜಿಲ್ಲಾಡಳಿತ ಮತ್ತು ಸ್ಥಳೀಯ ಪೋಲೀಸ್ ಠಾಣೆಯೊಂದಿಗೆ ಸಂಪರ್ಕಿಸಿ ಕ್ರಮಕೈಗೊಳ್ಳಬೇಕಾಗುತ್ತದೆ.
(ಇ)	ಚಿತ್ರೀಕರಣ ಸಂದರ್ಭದಲ್ಲಿ ಸುರಕ್ಷತೆ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿಗಳು ಇವೆಯೇ;(ವಿವರಗಳನ್ನು ಒದಗಿಸುವುದು;	ಚಿತ್ರೀಕರಣಕ್ಕೆ ಅನುಮತಿ ನೀಡುವಾಗ, ಚಿತ್ರೀಕರಣ ಸಂದರ್ಭದಲ್ಲಿ ಸುರಕ್ಷತೆ ಬಗ್ಗೆ ಸಂಬಂಧಿತ ಚಿತ್ರೀಕರಣ ಘಟಕದ ಮುಖ್ಯಸ್ಥರೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂಬ ಷರತ್ತನ್ನು ವಿಧಿಸಲು ಚಲನಚಿತ್ರ ನೀತಿ - 2011 ರಲ್ಲಿ ಸೂಚಿಸಲಾಗಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಚಿತ್ರೀಕರಣದ

		ಅನುಮತಿ ನೀಡಿದಾಗ; ಈ ಷರತ್ತನ್ನು ವಿಧಿಸಲಾಗುತ್ತಿದೆ.
(ಈ)	ಚಿತ್ರೀಕರಣ ಸಂದರ್ಭದಲ್ಲಿ ಮೃತಪಟ್ಟ ಸ್ಟಂಟ್‌ಮ್ಯಾನ್ ಗಳು ಸೇರಿದಂತೆ ಇತರೆ ಮೃತ ವ್ಯಕ್ತಿಗಳ ಕುಟುಂಬಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡ ಏನು? (ಈ ನಿಟ್ಟಿನಲ್ಲಿ ವಿವಿಧ ಇಲಾಖೆಗೆ ಜವಾಬ್ದಾರಿ, ಹೊಣೆ ಕುರಿತಾಗಿ ಪ್ರತ್ಯೇಕವಾದ ಮಾಹಿತಿ ಒದಗಿಸುವುದು)	ಚಿತ್ರೀಕರಣ ಸಂದರ್ಭದಲ್ಲಿ ಮೃತಪಟ್ಟ ಸ್ಟಂಟ್‌ಮ್ಯಾನ್ ಗಳು ಸೇರಿದಂತೆ ಇತರೆ ಆಕಸ್ಮಿಕಗಳಲ್ಲಿ, ಮೃತ ವ್ಯಕ್ತಿಗಳ ಕುಟುಂಬಗಳಿಗೆ ಪರಿಹಾರ ನೀಡುವ ಪ್ರಸ್ತಾವನೆಗಳ ಬಗ್ಗೆ ಆಯಾ ಜಿಲ್ಲಾಡಳಿತ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸುತ್ತವೆ.

ಸಂಖ್ಯೆ: ಕೆಸಿಐ-ಪಿಐಪಿ/261/2021

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ